## 2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ

## ಸತ್ರ ಮೊಕದ್ದಮೆ ಸಂಖ್ಯೆ:18/2022

ಪಿ.ಡಬ್ಲುಃ **15** ಸಿಡಬ್ಲುಃ **28**

ಸಾಕ್ಷಿಯ ಹೆಸರು : ಪಿ. ಸುರೇಶ್

ತಂದೆ ಹೆಸರು : ಪಿ. ಹುಲುಗಪ್ಪ

ವಯಸ್ಸು : **43** ವರ್ಷ

ವೃತ್ತಿ : ಹೆಚ್ . ಸಿ . ಮೋಕಾ ಪೊ. ಠಾಣೆ

ವಾಸಸ್ಥಳ : ಬಳ್ಳಾರಿ

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ **01-02-2023**

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

ನಾನು **2013** ನೇ ಸಾಲಿನಿಂದ **2022** ಜನವರಿ ವರೆಗೆ ಬ್ರೂಸ್ ಪೇಟೆ ಪೊ . ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ .

ಈ ಪ್ರಕರಣದಲ್ಲಿ ದಿಃ **02-12-2021** ರಂದು ಚಾಸಾ-**31** ರವರ ಮೌಖಿಕ ಆದೇಶದ ಮೇರೆಗೆ ನಾನು ಅವರ ಜೊತೆ ವಿಮ್ಸ್ ಆಸ್ಪತ್ರೆಗೆ ಬೆಳಗಿನ ಜಾವ **1-30** ರ ಸುಮಾರಿಗೆ ಹೋಗಿರುತ್ತೇವೆ . ಸದರಿ ಆಸ್ಪತ್ರೆಯಲ್ಲಿ ಚಾಸಾ-**1** ರವರು ಹೇಳಿದ ಹೇಳಿಕೆಯನ್ನು ನಾನು ಬರೆದಿರುತ್ತೇನೆ . ಸದರಿ ದೂರನ್ನು ಮತ್ತು ಅದರಲ್ಲಿರುವ ಸಹಿಗಳನ್ನು ಸಾಕ್ಷಿಯೂ ನೋಡಿ ಗುರುತಿಸಿದ ಮೇರೆಗೆ ನಿಪಿ-**1** ರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ-**1**(ಸಿ) ಮತ್ತು **1**(ಡಿ) ಎಂದು ಗುರುತಿಸಲಾಯಿತು . ಚಾಸಾ-**32** ರವರ ಆದೇಶದ ಮೇರೆಗೆ ಅವರ ಜೊತೆ ದಿಃ **02-12-2021** ರಂದು ಬೆಃ **9-00** ಗಂಟೆ ಸಮಾರಿಗೆ ಮಿಲ್ಲರಪೇಟೆಯ ಚಾಸಾ-**1** ರವರ ಮನೆಗೆ ಹೋಗಿ ಚಾಸಾ-**32** ರವರು ಪಂಚನಾಮೆ ಮಾಡುವ ಕಾಲಕ್ಕೆ ಭಾವ ಚಿತ್ರ ಗಳನ್ನು ತೆಗೆದಿರುತ್ತೇನೆ . ಸಾಕ್ಷಿಯೂ ನಿಪಿ-**17** ನ್ನು ನೋಡಿ ಗುರುತಿಸಿರುತ್ತಾರೆ . ದಿಃ **03-12-2021** ರಂದು ಚಾಸಾ-**32** ರವರ ಜೊತೆಗೆ ಹವಂಬಾವಿಯ ಎಲೆಪ್ಯಾಡ್ ರಸ್ತೆಯ ಹತ್ತಿರ ಹೋಗಿ

ಅಲ್ಲಿ ಪಂಚನಾಮೆಯ ಕಾಲಕ್ಕೆ ನಿಪಿ-19 ರಂತೆ ಭಾವಚಿತ್ರ ತೆಗೆದಿರುತ್ತೇನೆ. ಸಾಕ್ಷಿಯೂ ನಿಪಿ-19 ನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಭಾವ ಚಿತ್ರಗಳಿಗೆ ಸಂಬಂದಿಸಿದಂತೆ ನಾನು ಭಾರತೀಯ ಸಾಕ್ಷ ಅಧಿನಿಯಮ ಕಲಂ 65 ಬಿ ಅಡಿಯಲ್ಲಿ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಸಾಕ್ಷಿಯೂ ಸದರಿ ಪ್ರಮಾಣ ಪತ್ರ ನೋಡಿ ಗುರುತಿಸಿದ್ದು ಆರೋಪಿ ಪರ ವಕೀಲರ ತಕರಾರಿನೊಂದಿಗೆ ನಿಪಿ-30 ಎಂದು, ಸಾಕ್ಷಿಯ ಸಹಿಯನ್ನು ನಿಪಿ-30(ಎ) ಎಂದು ಗುರುತಿಸಲಾಯಿತು. ಸದರಿ ಪೋಟೋಗಳನ್ನು ನನ್ನ ವಿ. ವೋ ಕಂಪನಿ ಮೊಬೈಲ್‌ನಿಂದ ತೆಗೆದಿರುತ್ತೇನೆ.

<u>ಪಾಟೀಸವಾಲು ಆರೋಪಿತರ ಪರವಾಗಿ ಶ್ರೀ ಬಿ ವಿ ಬಿ ವಕೀಲರಿಂದಃ</u>

ನಾನು ತನಿಖಾಧಿಕಾರಿಯವರ ಮುಂದೆ ಚಾಸಾ-1 ರವರ ಹೇಳಿಕೆ ಪಡೆಯಲು ಚಾಸಾ-31 ರವರ ಆದೇಶದ ಮೇರೆಗೆ ವಿಮ್ಸ್ ಆಸ್ಪತ್ರೆಗೆ ಹೋಗಿ ಚಾಸಾ-1 ರವರ ಹೇಳಿಕೆ ಪಡೆದು ಅವರ ಸಹಿ ಪಡೆದಿರುತ್ತೇನೆ ಎಂದು ಹೇಳಿ ಬರೆಸಿಲ್ಲ ಎಂದರೆ ಸರಿ. ನಾನು ವಿಮ್ಸ್ ಆಸ್ಪತ್ರೆಗೆ ಹೋಗಿಲ್ಲ, ಚಾಸಾ-1 ರವರು ನನ್ನ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ, ಹಾಗೂ ನಿಪಿ-1 ಕ್ಕೆ ಪೊ. ಠಾಣೆಯಲ್ಲಿ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಿಃ 02-12-2021 ರಂದು ಮತ್ತು ದಿಃ 03-12-2021 ರಂದು ನಾನು ಪಂಚನಾಮೆಯ ಕಾಲಕ್ಕೆ ಹಾಜರಿದ್ದ ಬಗ್ಗೆ ಪಂಚನಾಮೆಯಲ್ಲಿ ಯಾವುದೇ ಸಹಿ ಮಾಡಿಲ್ಲ ಎಂದರೆ ಸರಿ. ನಿಪಿ-17 ಮತ್ತು 19 ನ್ನು ನನ್ನ ಮೊಬೈಲ್ ನಿಂದ ಪೋಟೋ ತೆಗೆದಿಲ್ಲ, ಸದರಿ ಪೋಟೋಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ತನಿಖೆಯಲ್ಲಿ ಭಾಗವಹಿಸಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.